.ಎಸ್. ನಂ.129/2022
ಪಿ. ಡಬ್ಲ್ಯೂ-1

**ದಿನಾಂಕಃ 13-09-2024**

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : 7 ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ.ಎಂ.ವಿ.ಕೆ. ರವರಿಂದ

ಎಷ್ಟು ಜನರ ವಿರುದ್ದ ನೀವು ದಾವೆಯಲ್ಲಿ ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿಯು ನಮ್ಮಗೆ ಹೊಲ ಇಲ್ಲ ಎಂದು ಹೇಳಿ ದಾವೆಯನ್ನು ಸಲ್ಲಿಸಿರುತ್ತೇವೆ ಎಂದು ಹೇಳುತ್ತಾರೆ. ಯಾರ ಯಾರ ವಿರುದ್ದ ಪ್ರಕರಣದ ದಾಖಲಿಸಿರುತ್ತೇನೆಂದು ಅವರ ಹೆಸರಿಗಳು ನನಗೆ ಹೇಳಲು ಬರುವುದಿಲ್ಲ. ಯಾವ ಕಾರಣಕ್ಕಾಗಿ 7 ನೇಪ್ರತಿವಾದಿಯ ವಿರುದ್ದ ದಾವೆಯನ್ನು ಸಲ್ಲಿಸಿರುತ್ತೀರಿ ಎಂದು ನಿಮಗೆ ಹೇಳಲು ಬರುತ್ತಿದ್ದೇಯೇ ಎಂದರೆ ಸಾಕ್ಷಿಯು ಅವರು ಯಾರು ಎಂದು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. 7 ನೇಪ್ರತಿವಾದಿಯು ಎಷ್ಟು ಜಮೀನನ್ನು ಖರೀದಿ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ.

ದಾವಾ ಆಸ್ತಿಯು ನಿಮ್ಮಗೆ ಹೇಗೆ ಬಂತು ಎಂದರೆ ಸಾಕ್ಷಿಯು ದಾವಾ ಆಸ್ತಿಯು ನನ್ನ ತಾತ ಆಸ್ತಿ ಇರುತ್ತದೆ ಎಂದು ಹೇಳುತ್ತಾರೆ. ನನ್ನ ತಾತನ ಹೆಸರು ಯಾಕೂಬಪ್ಪ ಇರುತ್ತದೆ. ದಾವಾ ಆಸ್ತಿಗೂ ಹಾಗೂ ಯಾಕೂಬಪ್ಪನಿಗೆ ಯಾವುದೇ ರೀತಿಯ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ, ದಾವಾ ಆಸ್ತಿಯು ನಮ್ಮ ಹಿರಿಯರ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನನ್ನ ತಂದೆ ಹಾಗೂ ಚಿಕ್ಕಪ್ಪ ಸ್ವಯಾರ್ಜಿತ ಆಸ್ತಿ ಆಗಿತ್ತು ಎಂದರೆ ಸಾಕ್ಷಿಯು ಅದು ನನ್ನ ತಾತನ ಆಸ್ತಿ ಇರುತ್ತದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯು ನನ್ನ ತಾತನ ಆಸ್ತಿ ಇಲ್ಲದರಿಂದ ದಾವಾ ಆಸ್ತಿಯಲ್ಲಿ ನಮ್ಮಗೆ ಪಾಲುಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

ದಿನಾಂಕಃ 13.05.2010 ರಂದು 7 ನೇಪ್ರತಿವಾದಿಯು 2 ಎಕರೆ ಜಮೀನಿನನ್ನು 1 ನೇ ಪ್ರತಿವಾದಿಯಿಂದ 3 ಲಕ್ಷ ರೂಪಾಯಿಗಳಿಗೆ ಖರೀದಿ ನೊಂದಣಿ ಪತ್ರವನ್ನು ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅವರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. 7 ನೇಪ್ರತಿವಾದಿಯ ಖರೀದಿ ಪತ್ರಕ್ಕೆ 1 ರಿಂದ 7 ನೇವಾದಿಯರು ಸಾಕ್ಷಿದಾರರಾಗಿ ಸಹಿಗಳು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅವರು ಸಹಿ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ 1 ನೇವಾದಿಯ ಗಂಡನೂ ಸಹ 7 ನೇಪ್ರತಿವಾದಿಯ ಖರೀದಿ ಪತ್ರಕ್ಕೆ

ಸಾಕ್ಷಿದಾರನನ್ನಾಗಿ ಸಹಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಎಲ್ಲ ಕುಟುಂಬದ ಸದಸ್ಯರ ಒಪ್ಪಿಗೆಯ ಮೇರೆಗೆ ನಮ್ಮ ತಂದೆಯವರು ದಾವಾ ಆಸ್ತಿಯನ್ನು 7 ನೇಪ್ರತಿವಾದಿಗೆ ಮಾರಾಟ ಮಾಡಿರುತ್ತ-ರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಅವಶ್ಯಕತೆಯ ಸಲುವಾಗಿ ನಮ್ಮ ತಂದೆಯವರು ದಾವಾ ಆಸ್ತಿಯನ್ನು 7 ನೇಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2 ಎಕರೆ ಜಮೀನು ಮಾರಾಟ ಆದ ನಂತರ ಅದರ ಕಬ್ಜೆಯನ್ನು ಖರೀದಿ ನೊಂದಾಣಿ ಆದ ದಿವಸ 7 ನೇಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಪತ್ರದ ಪ್ರಕಾರ 2 ಎಕರೆ ಜಮೀನು 7 ನೇಪ್ರತಿವಾದಿಯ ಹೆಸರಿಗೆ ವರ್ಗಾವಣಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವರ್ಗಾವಣೆಗೆ ನೀವು ಯಾರು ತಕರಾರು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ವರ್ಗಾವಣೆ ಆದ ನಂತರ 7 ನೇಪ್ರತಿವಾದಿಯು 2 ಎಕರೆ ಜಮೀನಿನ್ನು ಕೃಷಿಯೇತರ ಜಮೀನನ್ನಾಗಿ ಪರಿವರ್ತನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2 ಎಕರೆ ಜಮೀನನ್ನು ಕೃಷಿಯೇತರ ಜಮೀನನ್ನಾಗಿ ಪರಿವರ್ತನೆ ಮಾಡಿದ ನಂತರ ಸದರಿ ಜಮೀನಿನಲ್ಲಿ 7 ನೇಪ್ರತಿವಾದಿಯ ನಿವೇಶನಗಳನ್ನು ಮಾಡಿರುತ್ತಾನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರು ಸಹ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಯಾದಗಿರಿ ಪಟ್ಟಣವು ಜಿಲ್ಲಾ ಕೇಂದ್ರ ಆದ ಕಾರಣ ಜಮೀನಿಗೆ ಬೆಲೆ ಹೆಚ್ಚಾಗಿರುವ ಕಾರಣ ಪ್ರತಿವಾದಿಯರ ಕಡೆಯಿಂದ ಹೆಚ್ಚಿನ ಹಣವನ್ನು ಪಡೆಯುವ ಸಲುವಾಗಿ ನಾನು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ಪಾಟೀ ಸವಾಲು : 6 ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ.ಎನ್.ಬಿ.ಎ ರವರಿಂದ

6 ನೇಪ್ರತಿವಾದಿಯ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶವನ್ನು ಕೋರಿರುತ್ತಾರೆ ಆದರೆ ಅವರು ಸಕಾರಣ ನೀಡಿರುವುದಿಲ್ಲ ಆದ್ದರಿಂದ ಅವರ ಕೋರಿಕೆಯನ್ನು ತಿರಸ್ಕರಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ